ಕನ್ನಡ ಪ್ರಭ page no 04 9/1/2018

# ಬೆಸ್ಕಾಂ ಕಟ್ಟಡಕ್ಕೆ ಉದ್ಘಾಟನೆ ಭಾಗ್ಯವಿಲ್ಲ

**18 ತಿಂಗಳ ಹಿಂದೆಯೇ ಉಗ್ರಾಣ ಕಟ್ಟಡ ನಿರ್ಮಾಣ | ಆದರೂ ಉದ್ಘಾಟನೆ ಮಾತ್ರ ಇನ್ನೂ ಇಲ್ಲ**



• **ಕನ್ನಡ ಪ್ರಭ ವಾರ್ತೆ** ಬೆಂಗಳೂರು

ಇದು ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯವೋ ಅಥವಾ ಉದ್ಘಾಟನೆ ಮಾಡಲು ಜನಪ್ರತಿನಿಧಿಗಳು ಬರುತ್ತಿಲ್ಲವೋ ಗೊತ್ತಿಲ್ಲ. ಆದರೆ, ಸಾರ್ವಜನಿಕರ ತೆರಿಗೆ ಹಣದಿಂದ ಲಕ್ಷಾಂತರ ರು. ವೆಚ್ಚದಲ್ಲಿ ನಿರ್ಮಿಸಿರುವಕಟ್ಟಡವೊಂದುಕಳೆದ18ತಿಂಗಳಿನಿಂದಬಳಕೆಯಾಗದೇ ಹಾಳಾಗುವ ಹಾದಿಯಲ್ಲಿ ಇದೆ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ಕುಂಬಳಗೋಡಿನ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸೇರಿದ ಜಾಗದಲ್ಲಿ ಸುಮಾರು 30 ಲಕ್ಷ ರು. ವೆಚ್ಚದಲ್ಲಿ ಒಂದಸ್ತಿನ ಬೃಹತ್ ಕಟ್ಟಡ ಕಟ್ಟಿದೆ. ಬೆಸ್ಕಾಂನ ಉಗ್ರಾಣ ಮಾಡುವ ಉದೇಶಕ್ಕಾಗಿ ನಿರ್ಮಿಸಲಾದ ಕಟ್ಟಡ ಇದು. ಇಡೀ ಕಟ್ಟಡ ಸುಣ್ಣ ಬಣ್ಣಗಳಿಂದ ಸಂಪೂರ್ಣ ಸಿದ್ಧವಾಗಿ ಸುಮಾರು ಒಂದೂವರೆ ವರ್ಷವಾಗಿದೆ. ಆದರೆ ಈವರೆಗೆ ಉದ್ಘಾಟನೆ ಭಾಗ್ಯ ಮಾತ್ರ ದೊರೆಯದೇ ಇರುವುದು ಒಂದು ರೀತಿಯಲ್ಲಿ ಜನರ ಹಣವನ್ನು ಅನಗತ್ಯವಾಗಿ ವೆಚ್ಚ ಮಾಡಲಾಗಿದೆ ಎಂಬ ಟೀಕೆಗಳು ಕೇಳಿ ಬರುತ್ತಿವೆ. ಸುಸಜ್ಜಿತವಾಗಿರುವ ಕಟ್ಟಡದಲ್ಲಿ ಬೆಸ್ಕಾಂ ಉಪ ವಿಭಾಗ ಕಚೇರಿ ಸೇರಿದಂತೆ ಉಗ್ರಾಣವಾಗಿ ಬಳಸಲು ಉದ್ದೇಶಿಸಲಾಗಿದೆ. ಸದ್ಯ ಗಾಂಧಿನಗರದಲ್ಲಿರುವ ಉಗ್ರಾಣದಿಂದ ವಿದ್ಯುತ್ ಉಪಕರಣಗಳನ್ನು ತರಬೇಕಾಗುತ್ತದೆ. ಇದು ಒಂದು ರೀತಿಯಲ್ಲಿ ಪ್ರಯಾಸದ ಕೆಲಸವಾಗಿದೆ. ನೂತನ ಕಟ್ಟಡವನ್ನು ಬಳಸಿಕೊಂಡರೆ ಕೆಂಗೇರಿ ಭಾಗದ ಸಾರ್ವಜನಿಕರಿಗೆ ಹೆಚ್ಚು ಅನುಕೂಲವಾಗುತ್ತದೆ. ವಿದ್ಯುತ್ ಕೆಲಸಗಳು ತ್ವರಿತವಾಗಿ ನಡೆಯುತ್ತದೆ ಎಂಬುದು ಸಾರ್ವಜನಿಕರ ಅಭಿಪ್ರಾಯವಾಗಿದೆ. ಈ ಬಗ್ಗೆ ಕನ್ನಡಪ್ರಭ ಬೆಸ್ಕಾಂ ಹಿರಿಯ ಅಧಿಕಾರಗಳನ್ನು ಸಂಪರ್ಕಿಸಿದಾಗ ಈ ಬಗ್ಗೆ ಮಾಹಿತಿ ಪಡೆದು ಅನಂತರ ಪ್ರತಿಕ್ರಿಯೆ ತಿಳಿಸುವುದಾಗಿ ಹೇಳಿದರು.

## ಟಾಟಾ ಪವರ್‌ನಿಂದ ಚಾರ್ಜಿಂಗ್ ಸ್ಟೇಷನ್




**ಮುಂಬಯಿ :** ವಿದ್ಯುತ್ ಚಾಲಿತ ವಾಹನಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ರಸ್ತೆಗೆ ಇಳಿಸಬೇಕು ಎನ್ನುವ ಕೇಂದ್ರ ಸರ್ಕಾರದ ಕನಸಿನ ಯೋಜನೆಗೆ ಅನುಗುಣವಾಗಿ ಟಾಟಾ ಪವರ್ ಮೊದಲ ಹೆಜ್ಜೆ ಇರಿಸಿದೆ. ಟಾಟಾ ಪವರ್ ಇದೀಗ ಮುಂಬಯಿಯಲ್ಲಿ ತನ್ನ ಮೊದಲ ಚಾರ್ಜಿಂಗ್ ಕೇಂದ್ರಗಳನ್ನು ಆರಂಭಿಸಿದೆ. ಟಾಟಾ ಪವರ್ ಮುಂಬಯಿಯ ಎರಡು ಕಡೆಗಳಲ್ಲಿ ಚಾರ್ಜಿಂಗ್ ಘಟಕವನ್ನು ಆರಂಭಿಸಿದೆ. ಲೋವರ್ ಪರೇಲ್‌ನ ಪಲ್ಲಾಡಿಯಮ್ ಮಾಲ್ ಹಾಗೂ ಕುರ್ಲಾನ ಫಿನಿಕ್ಸ್ ಮಾರುಕಟ್ಟೆ ಕೇಂದ್ರಗಳಲ್ಲಿ ಟಾಟಾ ಪವರ್ ತನ್ನ ಚಾರ್ಜಿಂಗ್ ಘಟಕಗಳನ್ನು ತೆರೆದಿದೆ.

ಉದಯವಾಣಿ 9-1-18 P-6

# ಬಡ್ತಿ ಮೀಸಲು: ಪರಿಷ್ಕೃತ ಜೇಷ್ಠತಾ ಪಟ್ಟಿ, ಪ್ರಮಾಣಪತ್ರ ಸಲ್ಲಿಸಲು ಸರ್ಕಾರ ಸಿದ್ಧತೆ

**ಬೆಂಗಳೂರು:** ಬಡ್ತಿ ಮೀಸಲಾತಿಗೆ ಸಂಬಂಧಿಸಿದಂತೆ ಜ.15ರಂದು ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ವಿಚಾರಣೆಗೆ ಬರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಪರಿಷ್ಕೃತ ಜೇಷ್ಠತಾ ಪಟ್ಟಿಯೊಂದಿಗೆ ಪ್ರಮಾಣಪತ್ರ ಸಲ್ಲಿಸಲು ಸಿದ್ಧತೆ ಮಾಡಿಕೊಂಡಿದೆ.

ಬಡ್ತಿ ಮೀಸಲು ಪಡೆದಿರುವವರ ಹಿತಾಸಕ್ತಿ ಕಾಪಾಡುವ ಉದ್ದೇಶದಿಂದ ರಾಜ್ಯ ವಿಧಾನಮಂಡಲ ಅಂಗೀಕರಿಸಿರುವ ವಿಧೇಯಕ ರಾಷ್ಟ್ರಪತಿ ಅಂಗಳದಲ್ಲಿದ್ದು, ಜ.15ರೊಳಗೆ ಅಲ್ಲಿಂದ ಸಂದೇಶ ಬಾರದಿದ್ದರೆ ಪರಿಷ್ಕೃತ ಜೇಷ್ಠತಾ ಪಟ್ಟಿಯೊಂದಿಗೆ ಪ್ರಮಾಣಪತ್ರ ಸಲ್ಲಿಸಲು ಸರ್ಕಾರ ನಿರ್ಧರಿಸಿದೆ. ಈಗಾಗಲೇ ಎಲ್ಲ ಇಲಾಖೆಗಳ ಜೇಷ್ಠತಾ ಪಟ್ಟಿ ಸಿದ್ಧವಾಗಿದ್ದು, ಅದು ಆಡಳಿತ ಮತ್ತು ಸಿಬ್ಬಂದಿ ಸುಧಾರಣಾ ಇಲಾಖೆ ಬಳಿ ಇದೆ. ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸುವ ಸಂಬಂಧ ಸಿದ್ಧತೆ ಮಾಡಿಕೊಳ್ಳುವಂತೆ ಸರ್ಕಾರ ಸೂಚಿಸಿದೆ. ಇಲಾಖಾವಾರು ಪರಿಷ್ಕೃತ ಜೇಷ್ಠತಾ ಪಟ್ಟಿ ಸಿದ್ಧಗೊಂಡು ವೆಬ್‌ಸೈಟ್‌ನಲ್ಲೂ ಕೆಲವು ಇಲಾಖೆಗಳು ಪ್ರಕಟಿಸಿವೆ. ಆದರೆ, ಅದರಲ್ಲಿ ಯಾರಿಗೆ ಮುಂಬಡ್ತಿ, ಯಾರಿಗೆ ಹಿಂಬಡ್ತಿ ಎಂಬುದರ ಸ್ಪಷ್ಟತೆಯಿಲ್ಲ. 1978ರಿಂದ ಜೇಷ್ಠತಾ ಪಟ್ಟಿ ಸಿದ್ಧವಾಗಿದ್ದು ಕೆಲವರು ನಿವೃತ್ತಿಯಾಗಿದ್ದಾರೆ. ರಾಜ್ಯ ಸರ್ಕಾರ, ನ್ಯಾಯಾಲಯದ ತೂಗುಕತ್ತಿಯಿಂದ ಪಾರಾಗಲು ಪರಿಷ್ಕೃತ ಜೇಷ್ಠತಾ ಪಟ್ಟಿ ಜತೆ ಪ್ರಮಾಣ ಪತ್ರ ಸಲ್ಲಿಸಲಿದೆ. ಆ ನಂತರ ನ್ಯಾಯಾಲಯದ ಸೂಚನೆ ಮೇರೆಗೆ ಮುಂದಿನ ಪ್ರಕ್ರಿಯೆ ನಡೆಯಲಿದೆ ಎಂದು ಹೇಳಲಾಗಿದೆ.

ಮತ್ತೊಂದೆಡೆ ವಿಧೇಯಕ ಸಂಬಂಧ ಕೇಂದ್ರ ಗೃಹ ಇಲಾಖೆ ಸೂಚನೆ ಮೇರೆಗೆ ಆಡಳಿತ ಮತ್ತು ಸಿಬ್ಬಂದಿ ಸುಧಾರಣೆ ಇಲಾಖೆ ಪ್ರಧಾನ ಕಾರ್ಯದರ್ಶಿ ಅನಿಲ್ ಕುಮಾರ್ ಝಾ ಅವರು ದೆಹಲಿಗೆ ಹೋಗಿ ವಿವರಣೆ ನೀಡಿ ಬಂದಿದ್ದಾರೆ.

ಈ ಮಧ್ಯೆ, ಸುಪ್ರೀಂಕೋರ್ಟ್‌ನಲ್ಲಿ ಬಡ್ತಿ ಮೀಸಲಾತಿಗೆ ಸಂಬಂಧಿಸಿದಂತೆ ಕರ್ನಾಟಕದಿಂದಲೇ 25ಕ್ಕೂ ಹೆಚ್ಚು ಮೇಲ್ಮನವಿಗಳು ಸಲ್ಲಿಕೆಯಾಗಿದ್ದು, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದ ಬಡ್ತಿ ಮೀಸಲಾತಿ ಸಂಬಂಧದ ಪ್ರಕರಣಗಳನ್ನೂ ಸುಪ್ರೀಂಕೋರ್ಟ್‌ನಲ್ಲಿ ಒಂದೇ ಪೀಠಕ್ಕೆ ವರ್ಗಾಯಿಸಲಾಗಿದೆ. ಕರ್ನಾಟಕದ ಪ್ರಕರಣದಲ್ಲಿ ವಿಧೇಯಕ ರಾಷ್ಟ್ರಪತಿಯವರ ಅಂಗೀಕಾರಕ್ಕೆ ಹೋಗಿದೆ. ಹೀಗಿರುವಾಗ ನ್ಯಾಯಾಲಯ ದಿಢೀರ್ ತೀರ್ಮಾನ ಕೈಗೊಳ್ಳುವುದಿಲ್ಲ ಎಂಬ ಮಾತುಗಳು ಕೇಳಿಬರುತ್ತಿವೆ.

ವಿಜಯವಾಣಿ - 5-1-18

# ನ್ಯಾಯಾಂಗ ನಿಂದನೆಗೆ ಬೆದರಿದ ಅಧಿಕಾರಿಗಳು

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಮೀಸಲು ಮುಂಬಡ್ತಿ ಪ್ರಕರಣದಲ್ಲಿ ನ್ಯಾಯಾಲಯದ ಆದೇಶದಂತೆ ಹೊಸ ಜ್ಯೇಷ್ಠತಾ ಪಟ್ಟಿ ಸಿದ್ಧಪಡಿಸಿಕೊಂಡಿರುವ ಕೆಪಿಟಿಸಿಎಲ್, ಸುಪ್ರೀಂಕೋರ್ಟ್‌ನ ನ್ಯಾಯಾಂಗ ನಿಂದನೆ ಭೀತಿಯಿಂದ ತಪ್ಪಿಸಿಕೊಳ್ಳಲು ಹರ ಸಾಹಸ ಪಡುತ್ತಿದೆ. ಕೆಪಿಟಿಸಿಎಲ್‌ನಲ್ಲಿ ಖಾಲಿ ಇರುವ ಉನ್ನತ ಹುದ್ದೆಗಳಿಗೆ ಬಡ್ತಿ ನೀಡಲು ಸಿದ್ಧತೆ ಆರಂಭವಾಗಿದೆ. ಈ ಸಂಬಂಧ ಜನವರಿ 13ರಂದು ಮಹತ್ವದ ಸಭೆ ನಡೆಯಲಿದೆ. ಇತ್ತೀಚೆಗೆ ಇಲಾಖೆ ತಯಾರಿಸಿರುವ ಜ್ಯೇಷ್ಠತಾ ಪಟ್ಟಿಯಂತೆ ಬಡ್ತಿ ನೀಡಲು ನಿರ್ಧರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

**» ಖಾಲಿ ಹುದ್ದೆಗಳಿಗೆ ಜ್ಯೇಷ್ಠತಾ ಪಟ್ಟಿಯಂತೆ ಬಡ್ತಿಗೆ ಕೆಪಿಟಿಸಿಎಲ್ ಸಿದ್ಧತೆ**

ಕೆಪಿಟಿಸಿಎಲ್‌ನ ಇಂಜಿನಿಯರ್‌ಗಳು ನ್ಯಾಯಾಲಯದಲ್ಲಿ ಸಂಸ್ಥೆಯನ್ನೇ ಹೊಣೆಯಾಗಿಸಿ ಪ್ರಕರಣ ಹೂಡಿದ್ದರು. ನ್ಯಾಯಾಲಯ ಹೊಸ ಜ್ಯೇಷ್ಠತಾ ಪಟ್ಟಿಯನ್ನು ಪ್ರಕಟಿಸಲು ಕಾಲಮಿತಿ ಹಾಕಿತ್ತು.

ಹೊಸ ಜ್ಯೇಷ್ಠತಾ ಪಟ್ಟಿಯಂತೆ 24 ಮುಖ್ಯ ಇಂಜಿನಿಯರ್, 45 ಅಧೀಕ್ಷಕ ಇಂಜಿನಿಯರ್, 145 ಕಾರ್ಯ ನಿರ್ವಾಹಕ ಇಂಜಿನಿಯರ್ ಹುದ್ದೆಗಳಿಗೆ ಬಡ್ತಿ ನೀಡಬೇಕಾಗುತ್ತದೆ. ಹೊಸ ಜ್ಯೇಷ್ಠತಾ ಪಟ್ಟಿ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನವಾದರೆ, 24 ಹಾಲಿ ಮುಖ್ಯ ಇಂಜಿನಿಯರ್‌ಗಳ ಪೈಕಿ 13 ಅಧೀಕ್ಷಕ ಇಂಜಿನಿಯರ್ ಹಾಗೂ 11 ಕಾರ್ಯ ನಿರ್ವಾಹಕ ಇಂಜಿನಿಯರ್ ಹುದ್ದೆಗೆ ಹಿಂಬಡ್ತಿಯಾಗುತ್ತಾರೆ. 37 ಅಧೀಕ್ಷಕ ಇಂಜಿನಿಯರ್‌ಗಳು ಕಾರ್ಯನಿರ್ವಾಹಕ ಇಂಜಿನಿಯರ್‌ಗಳಾಗಿ ಹಿಂಬಡ್ತಿ ಹೊಂದುವರು.

ಪ್ರಜಾವಾಣಿ 9|1|2018

# ಶಾರ್ಟ್ ಸರ್ಕೀಟ್ ತಡೆಗಟ್ಟುವ ಕ್ರಮಗಳು

'ಮನೆ ಅಥವಾ ಮಳಿಗೆಗಳಿಗೆ ವೈರಿಂಗ್ ಮಾಡಿರುವ ಕುರಿತು ಪ್ರಮಾಣೀಕರಿಸಿದ ಬಳಿಕವೇ ಬೆಸ್ಕಾಂನಿಂದ ವಿದ್ಯುತ್ ಸಂಪರ್ಕ ನೀಡಲಾಗುತ್ತದೆ. ವಿದ್ಯುತ್ ಬೋರ್ಡ್‌ನಿಂದ ಕಂಬದವರೆಗೆ ಇರುವ ಯಾವುದೇ ಸಮಸ್ಯೆಯನ್ನು ದುರಸ್ತಿ ಮಾಡಲಾಗುತ್ತದೆ. ಆದರೆ, ಕಟ್ಟಡದ ಒಳಭಾಗದಲ್ಲಿ ಸಮಸ್ಯೆ ಉಂಟಾದರೆ, ಎಲೆಕ್ಟ್ರಿಷಿಯನ್‌ಗಳ ಮೂಲಕ ದುರಸ್ತಿ ಮಾಡಿಸಿಕೊಳ್ಳಬೇಕು' ಎಂದು [illegible] ಅಧಿಕಾರಿಯೊಬ್ಬರು ತಿಳಿಸಿದರು.

'ಗುಣಮಟ್ಟದ ತಂತಿಯನ್ನು ಬಳಸಬೇಕು. ತಂತಿಯಲ್ಲಿ ದೋಷ ಇದ್ದರೆ, ಈ ಬಗ್ಗೆ ಪರಿಶೀಲಿಸಬೇಕು. ಹೊಸ ತಂತಿಯನ್ನು ಅಳವಡಿಸಬೇಕು. ಅನೇಕ ತಂತಿಗಳು ಒಂದಕ್ಕೊಂದು ಬೆಸೆದುಕೊಳ್ಳದಂತೆ ನೋಡಿಕೊಳ್ಳಬೇಕು. ಕಾಲಕಾಲಕ್ಕೆ ಎಲೆಕ್ಟ್ರಿಷಿಯನ್‌ಗಳ ಮೂಲಕ ತಪಾಸಣೆ ನಡೆಸಬೇಕು. ಇದರಿಂದ ಶಾರ್ಟ್ ಸರ್ಕೀಟ್ ಆಗುವುದನ್ನು ತಪ್ಪಿಸಬಹುದು' ಎಂದು ಮಾಹಿತಿ ನೀಡಿದರು.

# ಬಾರ್ ಬೆಂಕಿಗೆ ಐವರ ಬಲಿ

## ಬೆಂಗಳೂರಿನಲ್ಲಿ ದುರ್ಘಟನೆ । ಕೆಲಸ ಮುಗಿಸಿ ಮಲಗಿದ್ದ ಸಿಬ್ಬಂದಿ ಸಾವು

**ಬೆಂಗಳೂರು:** ಶಾರ್ಟ್ ಸರ್ಕೀಟ್‌ನಿಂದ ಬೆಂಗಳೂರಿನ ಬಾರೊಂದರಲ್ಲಿ ಸಂಭವಿಸಿದ ಅಗ್ನಿ ಅನಾಹುತದಲ್ಲಿ ಐವರು ಕಾರ್ಮಿಕರು ಪ್ರಾಣ ಕಳೆದುಕೊಂಡಿದ್ದಾರೆ.

ಕಲಾಸಿಪಾಳ್ಯದ ಕುಂಬಾರರ ಸಂಘದ ಕಟ್ಟಡದಲ್ಲಿ ಸೋಮವಾರ ನಸುಕಿನ ಜಾವ 1.30ರಿಂದ 2.30 ಗಂಟೆಯೊಳಗೆ ನಡೆದ ಅನಾಹುತದಲ್ಲಿ ಬಾರ್ ಸುಟ್ಟು ಕರಕಲಾಗಿದೆ. ಮೂವರು ಹೊಗೆಯಿಂದ ಉಸಿರುಗಟ್ಟಿ ಮೃತಪಟ್ಟರೆ, ಇನ್ನಿಬ್ಬರು ಸುಟ್ಟ ಗಾಯಗಳಿಂದ ಸತ್ತಿದ್ದಾರೆ. ಹಾಸನ ಜಿಲ್ಲೆಯ ಮಂಜುನಾಥ್ (45), ಮಹೇಶ್(35), ತುಮಕೂರಿನ ರಂಗಸ್ವಾಮಿ (23), ಜೈಪ್ರಸಾದ್(26) ಹಾಗೂ ಮಂಡ್ಯದ ಕೀರ್ತಿ (24) ಮೃತಪಟ್ಟವರು.

**ಹಳೆಯ ಕಟ್ಟಡ:** 70 ವರ್ಷಕ್ಕೂ ಹಳೆಯ ಕಟ್ಟಡದಲ್ಲಿ 14 ವರ್ಷಗಳಿಂದ ಬಾರ್ ನಡೆಸಲಾಗುತ್ತಿತ್ತು. ನಾಲ್ಕು ಅಂತಸ್ತಿನ ಕಟ್ಟಡದ ನೆಲ ಮಾಳಿಗೆಯ ಇಕ್ಕಟ್ಟಿನಲ್ಲಿ ಬಾರ್ ಇದ್ದು, ಒಳ-ಹೊರಗೆ ಹೋಗಲು ಒಂದೇ ಪ್ರವೇಶ ದ್ವಾರ. ಭಾನುವಾರ ರಾತ್ರಿ 12 ಗಂಟೆಗೆ ಕ್ಯಾಷಿಯರ್ ರಾಮಚಂದ್ರ ಕಲೆಕ್ಷನ್ ಹಣದ ಜತೆ ಮನೆಗೆ ಮರಳಿದ್ದರು. ನೌಕರರೆಲ್ಲ ಅಲ್ಲೇ ಟೇಬಲ್‌ಗಳನ್ನು ಪಕ್ಕಕ್ಕೆ ಸರಿಸಿ ಸಾಲಾಗಿ ಮಲಗಿದ್ದರು. ಕ್ಯಾಶ್ ಟೇಬಲ್ ಪಕ್ಕದಲ್ಲಿನ ಸ್ವಿಚ್ ಬೋರ್ಡ್ ಪಕ್ಕದಲ್ಲಿ ಇದ್ದ ಜಂಕ್ಷನ್ ಬಾಕ್ಸ್‌ನಲ್ಲಿ ಕಾಣಿಸಿಕೊಂಡ ಬೆಂಕಿ ಐವರನ್ನು ಬಲಿ ಪಡೆಯಿತು.

### ಎಫ್‌ಐಆರ್‌ನಲ್ಲೇನಿದೆ?

- ಕಟ್ಟಡದಲ್ಲಿ ಬೆಂಕಿ ನಂದಿಸುವ ಉಪಕರಣಗಳು ಇರಲಿಲ್ಲ
- ತುರ್ತು ನಿರ್ಗಮನ ದಾರಿ ಇರಲಿಲ್ಲ
- ಚಾವಣಿ ಅತ್ಯಂತ ಕೆಳ ಮಟ್ಟದಲ್ಲಿದೆ.
- ಯಾವುದೇ ಮುನ್ನೆಚ್ಚರಿಕೆ ಕ್ರಮ ಇರಲಿಲ್ಲ

ನಮ್ಮ ಬೆಂಗಳೂರು ನೋಡಿ



ಅಗ್ನಿ ಅನಾಹುತದಿಂದ ಸುಟ್ಟು ಕರಕಲಾದ ಬಾರ್.

15/20 ಉದ್ದಳತೆಯ ಇಕ್ಕಟ್ಟಾದ ಬಾರ್ ಇದಾಗಿದ್ದು, ಕೆ.ಆರ್. ಮಾರುಕಟ್ಟೆ ಹೂ, ತರಕಾರಿ ಮತ್ತು ಹಣ್ಣಿನ ಮಂಡಿಗಳಲ್ಲಿ ಕೆಲಸ ಮಾಡುವ ಹಮಾಲಿಗಳು ಮತ್ತು ಕೂಲಿ ಕಾರ್ಮಿಕರೇ ಇಲ್ಲಿನ ಗಿರಾಕಿಗಳು. ರೋಲಿಂಗ್ ಶಟರ್ ಅನ್ನು ಒಳಗಿನಿಂದ ಲಾಕ್ ಮಾಡಿದ್ದರಿಂದ ಕೆಳಕ್ಕೆ ಇಳಿದು ಶಟರ್ ತೆರೆಯದೆ ಹೊರಗೆ ಹೋಗಲು ಬೇರೆ ದಾರಿ ಇರಲಿಲ್ಲ. ಮಲಗಿದ್ದ ಜಾಗದಲ್ಲಿ 5 ಅಡಿ ಎತ್ತರದ ಗೋಡೆ ಮತ್ತು ಅದರಲ್ಲೊಂದು ಕಿಟಕಿ ಮಾತ್ರವಿತ್ತು. ರೋಲಿಂಗ್ ಶಟರ್ ಕಡೆ ಐವರೂ ಧಾವಿಸಲು ಪ್ರಯತ್ನಿಸಿ ಸಾಧ್ಯವಾಗದೆ ಮೂವರು ಶೌಚಾಲಯಕ್ಕೆ ಹೋಗಿ ಬಾಗಿಲು ಹಾಕಿಕೊಂಡರು. ಅಲ್ಲೇ ಉಸಿರುಗಟ್ಟಿ ಕೊನೆಯುಸಿರೆಳೆದರು. ಉಳಿದಿಬ್ಬರು ಬಾಗಿಲ ದಿಕ್ಕಿಗೆ ಓಡಿ ಸುಟ್ಟ ಗಾಯಗಳಿಂದ ಸತ್ತಿದ್ದಾರೆ.

**ಮಡಿದವರ ಕುಟುಂಬದ ಆಕ್ರಂದನ**

**ರಾಜ್ಯದಲ್ಲಿ 21 ಸಾವಿರ ಅಸುರಕ್ಷಿತ ಕಟ್ಟಡ**

Hosa digantha

## ಕಡಿಮೆ ಅಂಕದಿಂದ ಎಚ್ಚೆತ್ತುಕೊಂಡ ಬಿಬಿಎಂಪಿ

# ಬರಲಿವೆ ಇನ್ನೂ 74 ಇ-ಟಾಯ್ಲೆಟ್

▸ ದಿಗಂತ ವರದಿ: ಬೆಂಗಳೂರು,ಜ.8

ದಿಗಂತ ಚಿತ್ರ



ಸ್ವಚ್ಛ ಸರ್ವೇಕ್ಷಣ ಸರ್ವೇ ಆರಂಭವಾಗುತ್ತಿದ್ದಂತೆ ಬಿಬಿಎಂಪಿ ನಗರದಲ್ಲಿ 74 ಇ-ಶೌಚಾಲಯಗಳ ನಿರ್ಮಾಣಕ್ಕೆ ಮುಂದಾಗಿದೆ.

ಕಳೆದ ವರ್ಷ ಸ್ವಚ್ಛ ಸರ್ವೇಕ್ಷಣ ಸಮೀಕ್ಷೆಯಲ್ಲಿ ಬೆಂಗಳೂರು ನಗರಕ್ಕೆ ಕಡಿಮೆ ಅಂಕ ಬಂದ ಹಿನ್ನೆಲೆಯಲ್ಲಿ ಎಚ್ಚೆತ್ತುಕೊಂಡಿರುವ ಬಿಬಿಎಂಪಿ ಈ ವರ್ಷ ಸಮೀಕ್ಷೆ ಆರಂಭವಾಗುತ್ತಿದ್ದಂತೆಯೇ ಸ್ವಚ್ಛತಾ ಕ್ರಮಗಳಿಗೆ ಹೆಚ್ಚಿನ ಒತ್ತು ನೀಡಿ ಒಂದಲ್ಲ ಒಂದು ಕ್ರಮಗಳನ್ನು ಕೈಗೊಳ್ಳುತ್ತಿದೆ. ಈಗಾಗಲೇ ತ್ಯಾಜ್ಯ ನಿರ್ವಹಣೆಗೆ ಹೊಸದಾಗಿ ಕೇಂದ್ರ ಸ್ಥಾಪಿಸುಲು ಮುಂದಾಗಿದೆ. ಇದೀಗ 74 ಇ-ಶೌಚ್ಯಗೃಹ ಸ್ಥಾಪನೆಗೆ ನಿರ್ಧರಿಸಲಾಗಿದ್ದು, ಈ ಶೌಚ ಗೃಹಗಳು ಆಧುನಿಕ ತಂತ್ರಜ್ಞಾನಗಳನ್ನು ಹೊಂದಿರಲಿವೆ.

**ಸ್ವಯಂ ಚಾಲಿತ ನೀರು, ಬೆಳಕು:** ಬಿಬಿಎಂಪಿ ರೂಪಿಸಿರುವ ಯೋಜನೆಯಂತೆ ಶೌಚಗೃಹಗಳ ಒಳಗೆ ಯಾರೂ ಇಲ್ಲದಿದ್ದರೆ ಲೈಟ್‌ಗಳು ಆಫ್ ಆಗಲಿದ್ದು, ಯಾರಾದರೂ ಒಳಗೆ ಹೋದರೆ ಮಾತ್ರ ಲೈಟ್‌ಗಳು ಬೆಳಗಲಿವೆ. ಉಳಿದಂತೆ ಫ್ಲಷ್ ಕೂಡ ಸ್ವಯಂ ಚಾಲಿತವಾಗಲಿದೆ. ಇದರಿಂದ ದುರ್ವಾಸನೆ ರಹಿತವಾಗಲಿವೆ.

**ಟೆಂಡರ್ ಆಹ್ವಾನ:** ಶೌಚಗೃಹ ಅಳವಡಿಕೆಗೆ ಕರೆಯಲಾಗಿರುವ ಟೆಂಡರ್‌ನಲ್ಲಿ ಈ ಎಲ್ಲ ಅಂಶಗಳನ್ನು ನಮೂದಿಸಲಾಗಿದ್ದು, ಗುತ್ತಿಗೆ ಪಡೆಯುವ ಸಂಸ್ಥೆ ಟೆಂಡರ್ ದಾಖಲೆಯಲ್ಲಿರುವಂತೆ ಶೌಚಗೃಹ ಸ್ವಯಂ ಚಾಲಿತವಾಗಿರಬೇಕು. ಗುತ್ತಿಗೆ ಪಡೆಯುವ ಸಂಸ್ಥೆ 2 ವರ್ಷಗಳ ಕಾಲ ನಿರ್ವಹಣೆ ಮಾಡಬೇಕಿದೆ. ಒಂದು ವೇಳೆ ಶೌಚಗೃಹದಲ್ಲಿ ಯಾವುದಾದರೂ ವಸ್ತು ಹಾಳಾದರೆ ಅದನ್ನು ದುರಸ್ತಿ ಮಾಡಬೇಕು ಎಂದು ನಿಯಮ ರೂಪಿಸಲಾಗಿದೆ.

**5.92 ಕೋಟಿ ರೂ ವೆಚ್ಚ:** ಸಾರ್ವಜನಿಕರು ಹೆಚ್ಚು ಓಡಾಡುವಂತಹ ಪ್ರದೇಶದಲ್ಲಿ ಇ-ಶೌಚಗೃಹ ಸ್ಥಾಪಿಸಲಾಗುತ್ತದೆ. ಅದಕ್ಕಾಗಿ 74 ಕಡೆ ಸ್ಥಳ ಗುರುತಿಸ ಲಾಗಿದೆ. ಅಲ್ಲದೆ, ಯೋಜನೆಗೆ ಒಟ್ಟು 5.92 ಕೋಟಿ ರೂ. ವೆಚ್ಚವಾಗುವ ಕುರಿತು ಅಂದಾಜಿಸಲಾಗಿದೆ. ಇನ್ನು, ಸಾರ್ವಜನಿಕರು ಶೌಚಗೃಹ ಬಳಕೆ ಮಾಡಬೇಕೆಂದರೆ 5 ರೂ. ಪಾವತಿಸಬೇಕಿದೆ.

**ಜಾಹೀರಾತುಗೆ ಅವಕಾಶ:** ಶೌಚಗೃಹ ನಿರ್ಮಿಸುವ ಸಂಸ್ಥೆಗೆ ಅದರ ಸುತ್ತ 5 ಚದರ ಮೀ. ವಿಸ್ತೀರ್ಣದಲ್ಲಿ ಜಾಹೀರಾತು ಪ್ರದರ್ಶನಕ್ಕೆ ಅನುವು ಮಾಡಿಕೊಡಲಾಗುತ್ತದೆ.ಅದಕ್ಕೆ ಬದಲಾಗಿ ಜಾಹೀರಾತು ತೆರಿಗೆಯನ್ನು ಬಿಬಿಎಂಪಿಗೆ ಪಾವತಿಸಬೇಕಾಗಲಿದೆ.